"ಮಧುರ ಮಕ್ಕಳೇ - ನಿಮ್ಮ ಈ ಜೀವನವನ್ನು ಕವಡೆಯಿಂದ ವಜ್ರ ಸಮಾನವನ್ನಾಗಿ ಮಾಡಿಕೊಳ್ಳಬೇಕೆಂದರೆ ಸಮಯವನ್ನು ಸಫಲ ಮಾಡಿ, ಅವಗುಣಗಳನ್ನು ತೆಗೆಯಿರಿ, ತಿನ್ನುವುದು-ಕುಡಿಯುವುದು, ಮಲಗುವುದರಲ್ಲಿ ಸಮಯವನ್ನು ವ್ಯರ್ಥ ಮಾಡಬಾರದು"

ಪ್ರಶ್ನೆ: ಮನುಷ್ಯರು ಯಾವ ಒಂದು ಶಬ್ದದಿಂದ ಎಲ್ಲರನ್ನೂ ಭಗವಂತನ ರೂಪವೆಂದು ತಿಳಿದುಕೊಂಡಿದ್ದಾರೆ?

ಉತ್ತರ: ಬಾಬಾ ಹೇಳುತ್ತಾರೆ - ನಾನು ಈ ಸಮಯದಲ್ಲಿ ಬಹುರೂಪಿಯಾಗಿದ್ದೇನೆ. ಇಲ್ಲಿ ಯಾವಾಗ ಮುರಳಿ ನುಡಿಸುತ್ತೇನೆ, ಆಗ ಪರಮಧಾಮವು ಖಾಲಿಯಾಗುತ್ತದೆ ಎಂದಲ್ಲ, ನಾನಂತು ಈ ಸಮಯದಲ್ಲಿ ತುಂಬಾ ಕೆಲಸ ಮಾಡಬೇಕಾಗುತ್ತದೆ, ತುಂಬಾ ಸೇವೆ ನಡೆಯುತ್ತದೆ. ಮಕ್ಕಳಿಗೆ, ಭಕ್ತರಿಗೆ ಸಾಕ್ಷಾತ್ಕಾರ ಮಾಡಿಸಬೇಕಾಗುತ್ತದೆ. ಈ ಸಮಯದಲ್ಲಿ ನಾನು ಬಹುರೂಪಿ ಆಗಿದ್ದೇನೆ, ಇದೇ ಒಂದು ಶಬ್ದದಿಂದ ಮನುಷ್ಯರು ಎಲ್ಲರನ್ನು ಭಗವಂತನ ರೂಪವೆಂದು ಹೇಳಿದ್ದಾರೆ.

ಪ್ರಶ್ನೆ: ತಂದೆಯ ಯಾವ ಶ್ರೀಮತವನ್ನು ಪಾಲನೆ ಮಾಡುವ ಮಕ್ಕಳು ಸುಪುತ್ರರಾಗಿದ್ದಾರೆ?

ಉತ್ತರ: ತಂದೆಯು ಹೇಳುತ್ತಾರೆ - ಮಕ್ಕಳೇ ಎಂದೂ ಸೇವಾಭಂಗ ಮಾಡಬೇಡಿ. ಸಮಯವು ತುಂಬಾ ಅಮೂಲ್ಯವಾಗಿದೆ, ಇದನ್ನು ಮಲಗುವುದರಲ್ಲಿ ಕಳೆಯಬೇಡಿ. ಕಡಿಮೆಗಿಂತ ಕಡಿಮೆ 8 ಗಂಟೆ ನನ್ನ ಸೇವೆ ಮಾಡಿ. ಈ ಶ್ರೀಮತವನ್ನು ಪಾಲನೆ ಮಾಡುವಂತಹವರೇ ಸುಪುತ್ರರಾಗಿದ್ದಾರೆ.

ಗೀತೆ: ನೀನು ರಾತ್ರಿಯನ್ನು ನಿದ್ರೆಯಲ್ಲಿ ಕಳೆದೆ, ಹಗಲನ್ನು ತಿನ್ನುವುದರಲ್ಲಿ ಕಳೆದೆ...

ಓಂ ಶಾಂತಿ. ತಂದೆಯು ಮಕ್ಕಳಿಗೆ ತಿಳಿಸುತ್ತಿದ್ದಾರೆ. ನಾವೆಲ್ಲರೂ ತಂದೆಯ ಮಕ್ಕಳಾಗಿದ್ದೇವೆಂದು ಮಕ್ಕಳೂ ಸಹ ತಿಳಿದುಕೊಂಡಿದ್ದೀರಿ. ನಮ್ಮ ಶರೀರದ ತಂದೆಯು ಶಾರೀರಿಕವಾಗಿದ್ದಾರೆ. ಆದರೆ ಆತ್ಮವು ಅಶರೀರಿ ಆಗಿದೆ. ಆದ್ದರಿಂದ ಆತ್ಮನ ತಂದೆಯು ಅಶರೀರಿ ಆಗಿದ್ದಾರೆ. ತಂದೆಯು ತಿಳಿಸಿದ್ದಾರೆ ಬೇಹದ್ದಿನ ತಂದೆಯಿಂದ ಬೇಹದ್ದಿನ ಸುಖದ ಆಸ್ತಿಯು ಸಿಗುತ್ತದೆ. ಈಗ ಶುರುವಾಗಿ ಅದು ತ್ರೇತಾದ ಅಂತ್ಯದವರೆಗೆ ನಡೆಯುತ್ತದೆ. ನೀವೀಗ ಭವಿಷ್ಯದ 21 ಜನ್ಮಗಳ ಪ್ರಾಲಬ್ಧಕ್ಕೋಸ್ಕರ ಪುರುಷಾರ್ಥ ಮಾಡುತ್ತಿದ್ದೀರಿ. ನಂತರ ಹದ್ದಿನದು ಶುರುವಾಗುತ್ತದೆ, ಬೇಹದ್ ಪೂರ್ಣ ಆಗಿ ಬಿಡುತ್ತದೆ. ಇವು ಗುಹ್ಯ ಮಾತುಗಳಾಗಿದೆಯಲ್ಲವೇ. ಹದ್ದಿನ ತಂದೆಯಿಂದ ನಾವು ಅರ್ಧಕಲ್ಪ ಹದ್ದಿನ ಆಸ್ತಿಯನ್ನು ತೆಗೆದುಕೊಳ್ಳುತ್ತಾ ಮತ್ತು ಬೇಹದ್ದಿನ ತಂದೆಯನ್ನು ನೆನಪು ಮಾಡುತ್ತಾ ಬಂದಿದ್ದೇವೆ. ಆತ್ಮನ ಸಂಬಂಧದಲ್ಲಿ ಎಲ್ಲರೂ ಸಹೋದರರಾಗಿದ್ದಾರೆ. ಭಗವಂತ ತಂದೆ ಆಗಿದ್ದಾರೆ. ಹೇಳುತ್ತೀರಿ - ನಾವು ಆತ್ಮಗಳು ಸಹೋದರ-ಸಹೋದರರಾಗಿದ್ದೇವೆ ನಂತರ ಮನುಷ್ಯ ಸೃಷ್ಟಿಯ ರಚನೆಯನ್ನು ರಚಿಸಿದಾಗ ಸಹೋದರ-ಸಹೋದರಿಯರಾಗುತ್ತೇವೆ. ಇದು ಹೊಸ ರಚನೆ ಆಗಿದೆಯಲ್ಲವೇ. ಮತ್ತೆ ಅಂತ್ಯದಲ್ಲಿ ಪರಿವಾರವು ಹೆಚ್ಚುತ್ತದೆ. ಚಿಕ್ಕಪ್ಪ, ದೊಡ್ಡಪ್ಪ, ಮಾಮಾ ಎಲ್ಲರೂ ಅಂತ್ಯದಲ್ಲಿ ಇರುತ್ತಾರೆ. ಈ ಸಮಯದಲ್ಲಿ ತಂದೆಯು ರಚನೆಯನ್ನು ರಚಿಸುತ್ತಾರೆ. ಇಲ್ಲಿ ಪುತ್ರ ಮತ್ತು ಪುತ್ರಿಯರಿದ್ದಾರೆ, ಬೇರೆ ಯಾವುದೇ ಸಂಬಂಧವಿಲ್ಲ. ಈಗ ನೀವು ಜೀವಿಸಿದ್ದಂತಯೇ ಸಹೋದರ-ಸಹೋದರಿಯರಾಗುತ್ತೀರಿ. ಅನ್ಯ ಯಾವುದೇ ಸಂಬಂಧದೊಂದಿಗೆ ಹೋಲಿಕೆ ಇಲ್ಲ. ಈಗ ನಿಮಗೆ ಹೊಸ ಜನ್ಮವು ಸಿಕ್ಕಿ ಬಿಟ್ಟಿದೆ. ನಾವೀಗ ಈಶ್ವರೀಯ ಸಂತಾನರಾಗಿದ್ದೇವೆ. ಶಿವವಂಶಿ ಬ್ರಹ್ಮಕುಮಾರ-ಕುಮಾರಿರಾಗಿದ್ದೇವೆ. ಬ್ರಹ್ಮಕುಮಾರ-ಕುಮಾರಿಯರಿಗೆ ಮತ್ಯಾವುದೇ ಸಂಬಂಧವಿಲ್ಲ. ಈ ಸಮಯದಲ್ಲಿ ಇಡೀ ಪ್ರಪಂಚವು ಪತಿತವಾಗಿದೆ, ಇದನ್ನು ಪಾವನ ಮಾಡಲೇ ಬೇಕು. ಬಾಬಾ ನಾವು ನಿಮ್ಮವರಾಗಿದ್ದೇವೆ ಎಂದು ಮಕ್ಕಳು ಹೇಳುತ್ತಾರೆ. ತಂದೆಯು ಹೇಳುತ್ತಾರೆ - ಮಕ್ಕಳೇ ಭವಿಷ್ಯಕ್ಕೋಸ್ಕರ ಪುರುಷಾರ್ಥ ಮಾಡಿ, ತಮ್ಮ ಜೀವನವನ್ನು ವಜ್ರ ಸಮಾನ ಮಾಡಿಕೊಳ್ಳಿ. ಇಡೀ ದಿನ ಕೇವಲ ತಿನ್ನುವುದು, ಕುಡಿಯುವುದು, ರಾತ್ರಿಯಲ್ಲಿ ಮಲಗುವುದು ಮತ್ತು ತಂದೆಯನ್ನು ನೆನಪು ಮಾಡದೆ ಇರುವುದು........ ಇದರಿಂದ ಯಾವುದೇ ವಜ್ರ ಸಮಾನ ಜನ್ಮ ಸಿಗುವುದಿಲ್ಲ. ತಂದೆಯು ಹೇಳುತ್ತಾರೆ - ಶರೀರ ನಿರ್ವಹಣಾರ್ಥ ಕರ್ಮ ಮಾಡುತ್ತಾ, ಗೃಹಸ್ಥ ವ್ಯವಹಾರದಲ್ಲಿ ಇರುತ್ತಾ, ಕಮಲಪುಷ್ಪ ಸಮಾನರಾಗಬೇಕಾಗಿದೆ. ನಾವು ಕವಡೆಯಿಂದ ವಜ್ರದ ಸಮಾನ ಅರ್ಥಾತ್ ಮನುಷ್ಯನಿಂದ ದೇವತೆ ಆಗುತ್ತಿದ್ದೇವೆ ಎಂದು ನಿಮಗೆ ತಿಳಿದಿದೆ. ಮನುಷ್ಯರಲ್ಲಿ ತುಂಬಾ ಅವಗುಣಗಳಿವೆ. ದೇವತೆಗಳಲ್ಲಿ ಗುಣಗಳಿರುತ್ತವೆ, ಆದ್ದರಿಂದಲೇ ಮನುಷ್ಯರು ದೇವತೆಗಳ ಮುಂದೆ ಹೋಗಿ ತಮ್ಮ ಅವಗುಣಗಳನ್ನು ಹೇಳುತ್ತಾರಲ್ಲವೇ. ತಾವು ಸರ್ವ ಗುಣ ಸಂಪನ್ನರು.... ನಾವು ನೀಚರು ಪಾಪಿಗಳಾಗಿದ್ದೇವೆ. ಈಗ ತಂದೆಯು ಹೇಳುತ್ತಾರೆ - ತಮ್ಮಿಂದ ಆಸುರಿ ಗುಣಗಳನ್ನು ತೆಗೆದು ಈಶ್ವರೀಯ ದೈವೀ ಗುಣಗಳನ್ನು ಧಾರಣೆ ಮಾಡಬೇಕಾಗಿದೆ. ತಂದೆಯಂತು ನಿರಾಕಾರನಾಗಿದ್ದಾರೆ, ಮನುಷ್ಯ ಸೃಷ್ಟಿಯ ಬೀಜರೂಪ ಆಗಿದ್ದಾರೆ. ಅವರು ಸತ್ಯ, ಚೈತನ್ಯ ಆಗಿದ್ದಾರೆ, ಜ್ಞಾನಸಾಗರ ಆಗಿದ್ದಾರೆ. ಈ ಜ್ಞಾನವು ಬುದ್ಧಿಯಲ್ಲಿ ಕುಳಿತಿದೆಯಲ್ಲವೇ. ಇದು ಹೊಸ ಜ್ಞಾನವಾಗಿದೆ. ಯಾವುದೇ ವೇದ-ಶಾಸ್ತ್ರಗಳಲ್ಲಿ ಈ ಜ್ಞಾನವಿಲ್ಲ. ಈಗ ನೀವು ಏನನ್ನು ಕೇಳುತ್ತೀರಿ, ಇದು ಮತ್ತೆ ಪ್ರಾಯಃಲೋಪ ಆಗಿ ಬಿಡುವುದು. ಈಗ ನೀವು ತಿಳಿದುಕೊಂಡಿದ್ದೀರಿ - ನಾವು ಆಸುರಿಗುಣವುಳ್ಳ ಮನುಷ್ಯರಿಂದ ಧಾರಣೆ ಮಾಡಿ ತಂದೆಯ

ಮುಖಾಂತರ ದೇವತೆ ಆಗುತ್ತಿದ್ದೇವೆ. ಪಾಪಗಳ ಹೊರೆಯು ತಲೆಯ ಮೇಲಿದೆ ಅದನ್ನು ತಂದೆಯ ನೆನಪಿನಿಂದ ನಾವು ಭಸ್ಮ ಮಾಡುತ್ತೇವೆ. ಭಕ್ತಿ ಮಾರ್ಗದಲ್ಲೂ ಸಹ ಗಂಗೆಯಲ್ಲಿ ಸ್ನಾನ ಮಾಡುವುದರಿಂದ ಪಾಪವು ಭಸ್ಮವಾಗುತ್ತದೆ ಎಂದು ಹೇಳುತ್ತಲೇ ಬಂದಿದ್ದಾರೆ. ಆದರೆ ನೀರಿನಿಂದ ಪಾವನರಾಗಲು ಸಾಧ್ಯವಿಲ್ಲ. ಒಂದುವೇಳೆ ಪಾವನರಾಗಿದ್ದೇ ಆದರೆ ನಂತರ ಪತಿತ ಪಾವನ ತಂದೆಯನ್ನು ಏಕೆ ನೆನಪು ಮಾಡುತ್ತೀರಿ. ಏನೂ ತಿಳಿದುಕೊಂಡಿಲ್ಲ. ಬುದ್ಧಿವಂತರು ಮತ್ತು ಬುದ್ಧಿಹೀನರ ಈ ನಾಟಕವು ಮಾಡಲ್ಪಟ್ಟಿದೆ. ಈಗ ನೀವು ಎಷ್ಟೊಂದು ಬುದ್ಧಿವಂತರಾಗುತ್ತಿದ್ದೀರಿ. ಇಡೀ ಸೃಷ್ಟಿಚಕ್ರವನ್ನು ಅರಿತುಕೊಂಡಿದ್ದೀರಿ. ಇತಿಹಾಸ ಭೂಗೋಳವನ್ನು ಅರಿತುಕೊಳ್ಳುವುದು, ಇದು ತಿಳುವಳಿಕೆಯಾಗಿದೆಯಲ್ಲವೇ. ಒಂದುವೇಳೆ ತಿಳಿದುಕೊಂಡಿಲ್ಲವೆಂದರೆ ಅವರನ್ನು ಬುದ್ಧಿಹೀನರೆಂದು ಹೇಳುತ್ತಾರಲ್ಲವೇ.

ಈಗ ನೀವು ಮಕ್ಕಳು ತಿಳಿದುಕೊಂಡಿದ್ದೀರಿ - ನಾನು ನಿಮ್ಮನ್ನು ವಜ್ರ ಸಮಾನರನ್ನಾಗಿ ಮಾಡಲು ಬಂದಿದ್ದೇನೆ ಎಂದು ತಂದೆಯು ತಮ್ಮ ಪರಿಚಯವನ್ನು ತಮ್ಮ ಮಕ್ಕಳಿಗೆ ಕೊಟ್ಟಿದ್ದಾರೆ. ಇಲ್ಲಿಂದ ಕೇಳಿ ಹೋಗಿ ತಿಂದು, ಕುಡಿದು ಹೇಗೆ ಹಿಂದೆ ನಡೆಯುತ್ತಿದ್ದಿರಿ..... ಆ ರೀತಿ ಆಗಬಾರದು. ಅದಂತೂ ಕವಡೆಯ ಸಮಾನ ಜೀವನವಾಗಿತ್ತು. ದೇವತೆಗಳದು ವಜ್ರ ಸಮಾನ ಜೀವನವಾಗಿದೆ. ಅವರು ಸ್ವರ್ಗದಲ್ಲಿ ಸುಖವನ್ನು ಭೋಗಿಸುತ್ತಿದ್ದರು. ಚಿತ್ರವೂ ಇದೆಯಲ್ಲವೇ. ನಾವೇ ಸುಖಿಗಳಾಗಿದ್ದೆವು, ನಾವೇ ದುಃಖಿಗಳಾದೆವು ಎನ್ನುವುದನ್ನು ನೀವು ಮೊದಲು ತಿಳಿದುಕೊಂಡಿರಲಿಲ್ಲ. ನಾವು 84 ಜನ್ಮಗಳನ್ನು ಹೇಗೆ ತೆಗೆದುಕೊಂಡೆವು, ಇದನ್ನೂ ಸಹ ಮೊದಲು ತಿಳಿದುಕೊಂಡಿರಲಿಲ್ಲ. ಈಗ ನಾನು ತಿಳಿಸುತ್ತೇನೆ. ನೀವೀಗ ಅನ್ಯರಿಗೂ ತಿಳಿಸಲು ಯೋಗ್ಯರಾಗಿದ್ದೀರಿ. ತಂದೆಯು ಬುದ್ಧಿವಂತರನ್ನಾಗಿ ಮಾಡುವುದರಿಂದ ಮತ್ತೆ ಅನ್ಯರಿಗೂ ಆ ತಿಳುವಳಿಕೆಯನ್ನು ಕೊಡಬೇಕು. ಮನೆಯಲ್ಲಿ ಹೋದಾಗ ಮತ್ತೆ ಅದೇ ಹಳೆಯ ಚಲನೆಯಲ್ಲಿ ನಡೆಯುವಂತಾಗಬಾರದು. ಶಿಕ್ಷಣವನ್ನು ಪಡೆದು ಮತ್ತೆ ಅನ್ಯರಿಗೂ ಶಿಕ್ಷಣವನ್ನು ಕೊಡಿ. ತಂದೆಯ ಪರಿಚಯವನ್ನು ಕೊಡಲು ಹೋಗಬೇಕಾಗುತ್ತದೆ - ಬೇಹದ್ದಿನ ತಂದೆಯು ಎಲ್ಲರಿಗೂ ಒಬ್ಬರೇ ಆಗಿದ್ದಾರೆ. ಎಲ್ಲಾ ಧರ್ಮದವರು ಅವರನ್ನೇ ಹೇ! ಪರಮಪಿತ ಪರಮಾತ್ಮ ಅಥವಾ ಹೇ! ಪ್ರಭು ಎಂದು ಕರೆಯುತ್ತಾರೆ. ಪರಮಾತ್ಮನನ್ನು ನೆನಪು ಮಾಡದೆ ಇರುವವರು ಯಾರೂ ಇರುವುದಿಲ್ಲ. ಎಲ್ಲಾ ಧರ್ಮದ ತಂದೆಯು ಒಬ್ಬರೇ ಆಗಿದ್ದಾರೆ. ಒಬ್ಬರನ್ನೇ ಎಲ್ಲರೂ ನೆನಪು ಮಾಡುತ್ತಾರೆ. ತಂದೆಯಿಂದ ಆಸ್ತಿ ಪಡೆಯಲು ಎಲ್ಲರೂ ಹಕ್ಕುಧಾರರಾಗಿದ್ದಾರೆ. ಆಸ್ತಿಯ ಮೇಲೆ ತಿಳಿಸಬೇಕಾಗಿದೆ. ತಂದೆಯು ಯಾವ ಆಸ್ತಿಯನ್ನು ಕೊಡುತ್ತಾರೆ? ಮುಕ್ತಿ ಮತ್ತು ಜೀವನ್ಮುಕ್ತಿ. ಇಲ್ಲಂತೂ ಎಲ್ಲರೂ ಜೀವನ ಬಂಧನದಲ್ಲಿ ಇದ್ದಾರೆ. ತಂದೆಯೇ ಬಂದು ಎಲ್ಲರನ್ನು ರಾವಣನ ಬಂಧನದಿಂದ ಬಿಡಿಸುತ್ತಾರೆ. ಈ ಸಮಯದಲ್ಲಿ ಯಾರೂ ಬಂಧನ ಮುಕ್ತರಾಗಿಲ್ಲ ಏಕೆಂದರೆ ರಾವಣ ರಾಜ್ಯವಾಗಿದೆ. ದೇಹಾಭಿಮಾನಿಗಳಾಗಿದ್ದಾರೆ. ದೇವತೆಗಳು ಆತ್ಮಾಭಿಮಾನಿಗಳಾಗುವುದರಿಂದ ನಾವು ಆತ್ಮ ಒಂದು ಶರೀರವನ್ನು ಬಿಟ್ಟು ಇನ್ನೊಂದು ಶರೀರವನ್ನು ತೆಗೆದುಕೊಳ್ಳುತ್ತೇವೆ ಎನ್ನುವುದನ್ನು ತಿಳಿದಿರುತ್ತಾರೆ. ಮನುಷ್ಯರು ಕೇವಲ ಪರಮಾತ್ಮನನ್ನೇ ಅರಿತುಕೊಂಡಿಲ್ಲ. ಪರಮಾತ್ಮನನ್ನು ಅರಿತುಕೊಂಡರೆ ನಂತರ ಇಡೀ ಸೃಷ್ಟಿಚಕ್ರವನ್ನು ಅರಿತುಕೊಳ್ಳುತ್ತಾರೆ. ನೀವೇ ತ್ರಿಕಾಲದರ್ಶಿಗಳಾಗಿದ್ದೀರಿ. ಬ್ರಾಹ್ಮಣರನ್ನು ತಂದೆಯು ಕುಳಿತು ತ್ರಿಕಾಲದರ್ಶಿಗಳನ್ನಾಗಿ ಮಾಡುತ್ತಾರೆ. ಯಾವಾಗ ದೇವತೆಗಳೂ ತ್ರಿಕಾಲದರ್ಶಿಗಳಾಗಿರುವುದಿಲ್ಲ ಎಂದಾಗ ಅವರ ವಂಶಾವಳಿಯು ಬಂದಾಗ ಅವರಲ್ಲೂ ಸಹ ಈ ಜ್ಞಾನ ಇರುವುದಿಲ್ಲವೆಂದಾಗ ಮತ್ತೆ ಅನ್ಯರಲ್ಲಿ ಈ ಜ್ಞಾನ ಎಲ್ಲಿಂದ ಬರಬೇಕು. ಕೊಡುವವರು ಒಬ್ಬರೇ ಆಗಿದ್ದಾರೆ. ಈ ಸಹಜ ರಾಜಯೋಗದ ಜ್ಞಾನವು ಮತ್ತ್ಯಾರಿಗೂ ಇರಲು ಸಾಧ್ಯವಿಲ್ಲ. ದೇವೀ-ದೇವತಾ ಧರ್ಮದ ಶಾಸ್ತ್ರಗಳೂ ಬೇಕು, ಆದ್ದರಿಂದ ನಾಟಕದ ಅನುಸಾರ ಅವರು ನಂತರ ಶಾಸ್ತ್ರಗಳನ್ನು ಮಾಡಬೇಕಾಗುತ್ತದೆ. ಗೀತಾ ಭಾಗವತ ಮುಂತಾದವೆಲ್ಲವೂ ಹೀಗೆಯೇ ಆಗುತ್ತದೆ. ಗ್ರಂಥಗಳೂ ಸಹ ಹೀಗೆಯೇ ಆಗುತ್ತವೆ. ಈಗ ಗ್ರಂಥವು ಎಷ್ಟೊಂದು ದೊಡ್ಡದಾಗಿ ಬಿಟ್ಟಿದೆ. ಇಷ್ಟು ಚಿಕ್ಕದಾಗಿತ್ತು-ಕೈಯಿಂದ ಬರೆಯಲ್ಪಟ್ಟಿತ್ತು. ನಂತರ ವೃದ್ಧಿಯನ್ನು ಪಡೆದಿದೆ. ಈ ಶಾಸ್ತ್ರಗಳು ಹಾಗೆಯೇ ಮಾಡಲ್ಪಟ್ಟಿದೆ. ಒಂದುವೇಳೆ ಇವುಗಳ ಗ್ರಂಥವನ್ನು ಕುಳಿತು ಬರೆದರೆ ತುಂಬಾ ದೊಡ್ಡದಾಗಿ ಬಿಡುತ್ತದೆ. ಆದರೆ ನಂತರ ಇವುಗಳನ್ನು ಸಂಕ್ಷಿಪ್ತ ಮಾಡಲಾಗಿದೆ. ಅಂತ್ಯದಲ್ಲಿ ತಂದೆಯು ಎರಡು ಅಕ್ಷರಗಳನ್ನು ಹೇಳುತ್ತಾರೆ - ಮನ್ಮನಾಭವ. ನಾನು ನಿಮಗೆ ಎಲ್ಲಾ ವೇದ, ಶಾಸ್ತ್ರಗಳ ಸಾರವನ್ನು ತಿಳಿಸುತ್ತೇನೆ. ಆದ್ದರಿಂದ ಅವಶ್ಯವಾಗಿ ಇಂತಿಂತಹ ಶಾಸ್ತ್ರಗಳಲ್ಲಿ ಹೀಗೀಗೆ ಇದೆ ಎಂದು ಹೆಸರುಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇವುಗಳು ಯಾವುದೇ ಧರ್ಮದ ಶಾಸ್ತ್ರವಲ್ಲ. ಭಾರತದ ಧರ್ಮವು ಒಂದೇ ಆಗಿದೆ. ಆದರೆ ಇದು ಯಾವ ಧರ್ಮದ ಶಾಸ್ತ್ರವಾಗಿದೆ ಎಂದು ಸಿದ್ಧ ಮಾಡಲಾಗುವುದಿಲ್ಲ. ಭಾರತದ ಶಾಸ್ತ್ರವು ಒಂದೇ ಗೀತೆಯಾಗಿದೆ. ಗೀತೆಯೂ ಸರ್ವ ಶಾಸ್ತ್ರ ಶಿರೋಮಣಿ ಎಂದು ಗೀತೆಯ ಮಹಿಮೆಯನ್ನು ನೀವು ಸ್ಪಷ್ಟವಾಗಿ ತಿಳಿದುಕೊಂಡಿದ್ದೀರಿ. ಈ ಗೀತೆಯಿಂದ ತಂದೆಯು ಬಂದು ಭಾರತವನ್ನು ಸ್ವರ್ಗವನ್ನಾಗಿ ಮಾಡುತ್ತಾರೆ. ಭಾರತದ ಶಾಸ್ತ್ರಗಳಿಗೆ ತುಂಬಾ ಗೌರವ ಸಿಗುತ್ತದೆ. ಆದರೆ ಗೀತೆಯ ಭಗವಂತ ಯಾರಾಗಿದ್ದರು, ಅವರನ್ನು ತಿಳಿಯದೇ ಇರುವ ಕಾರಣ ಅಸತ್ಯ ಪ್ರತಿಜ್ಞೆಯನ್ನು ಮಾಡಿಸುತ್ತಾರೆ. ಈಗ ಅದನ್ನು ಸರಿ ಮಾಡಿ. ಭಗವಂತನು ನಾನು ಸರ್ವವ್ಯಾಪಿ ಆಗಿದ್ದೇನೆ ಎಂದು ಹೇಳಿಲ್ಲ.

ಒಂದು ಮಗು ಕೇಳಿದರು - ಶಿವಬಾಬಾ ಯಾವಾಗ ಇಲ್ಲಿ ಬರುತ್ತಾರೆ, ಮುರಳಿಯನ್ನು ನುಡಿಸುತ್ತಾರೆಂದರೆ ಪರಂಧಾಮದಲ್ಲಿಯೂ ಇರುತ್ತಾರೆಯೇ? ಬಾಬಾ ಹೇಳುತ್ತಾರೆ ಈ ಸಮಯದಲ್ಲಿ ನಿಮಗೆ ತುಂಬಾ ಸೇವೆ ಮಾಡಬೇಕಾಗುತ್ತದೆ. ತುಂಬಾ ಸರ್ವೀಸ್ ನಡೆಯುತ್ತದೆ. ಅನೇಕ ಮಕ್ಕಳಿಗೆ, ಭಕ್ತರು ಮುಂತಾದವರಿಗೂ ಸಾಕ್ಷಾತ್ಕಾರ ಮಾಡಿಸುತ್ತೇನೆ. ಈ ಸಮಯದಲ್ಲಿ ನಾನು ಬಹುರೂಪಿ ಆಗಿದ್ದೇನೆ. ಈ ಬಹುರೂಪಿ ಅಕ್ಷರದಿಂದಲೇ ಮನುಷ್ಯರು ಎಲ್ಲರೂ ಭಗವಂತನ ರೂಪವೆಂದು ತಿಳಿದುಕೊಂಡಿದ್ದಾರೆ. ಮಾಯಾ

ಉಲ್ಟಾ ಮಾಡಿಬಿಡುತ್ತದೆ ನಂತರ ತಂದೆಯು ಅದನ್ನು ಸುಲ್ಟಾ ಮಾಡುತ್ತಾರೆ. ನೀವು ಮಕ್ಕಳು ಈಗ ಮುಕ್ತಿಧಾಮದಲ್ಲಿ ಹೋಗುವಂತಹ ಪುರುಷಾರ್ಥವನ್ನು ಮಾಡುತ್ತೀರಿ. ನಿಮ್ಮ ಬುದ್ಧಿಯು ಮುಕ್ತಿಧಾಮದ ಕಡೆ ಇದೆ. ನಿಮಗೆ ತಂದೆಯು ಮಾಡಿಸುತ್ತಿರುವಂತಹ ಪುರುಷಾರ್ಥವನ್ನು ಯಾವುದೇ ಮನುಷ್ಯರು ಮಾಡಿಸಲು ಸಾಧ್ಯವಿಲ್ಲ. ಈಗ ತಮ್ಮ ಬುದ್ಧಿಯೋಗವನ್ನು ಅಲ್ಲಿ ಜೋಡಿಸಿ. ಜೀವಿಸಿದ್ದಂತಯೇ ಈ ಶರೀರವನ್ನು ಮರೆಯುತ್ತಾ ಹೋಗಿ. ಮನುಷ್ಯರು ಸತ್ತಾಗ ಸ್ವರ್ಗಕ್ಕೆ ಹೋದರೆಂದು ಹೇಳುತ್ತಾರೆ. ಆದರೂ ಸಹ ಮತ್ತೆ ಅಳುತ್ತಿರುತ್ತಾರೆ. ತಂದೆಗೆ ಯಾರು ಸುಪುತ್ರ ಮಕ್ಕಳಿದ್ದಾರೆ ಅವರೇ ತಂದೆಯ ಸಹಯೋಗಿಗಳಾಗಿ ಸೇವೆ ಮಾಡುತ್ತಾರೆ. ಅವರು ಎಂದೂ ಸೇವಾಭಂಗ ಮಾಡುವುದಿಲ್ಲ. ಒಂದುವೇಳೆ ಯಾರಾದರೂ ಸೇವಾಭಂಗ ಮಾಡಿದರೆಂದರೆ ಅರ್ಥ ತಮ್ಮ ಭಂಗವನ್ನು ಮಾಡಿಕೊಳ್ಳುತ್ತಾರೆ. ತಂದೆಯು ಹೇಳುತ್ತಾರೆ - ಮಧುರ ಮಕ್ಕಳೇ ಈ ಸಮಯವು ತುಂಬಾ ಅಮೂಲ್ಯವಾಗಿದೆ. ಭವಿಷ್ಯ 21 ಜನ್ಮಗಳಿಗೆ ನೀವು ಸಂಪಾದನೆಯನ್ನು ಮಾಡುತ್ತೀರಿ. ನಮಗೆ ವಿಶ್ವದ ರಾಜ್ಯಭಾಗ್ಯವು ಸಿಗುತ್ತದೆ, ಎಷ್ಟು ದೊಡ್ಡ ಸಂಪಾದನೆ ಆಗಿದೆ. ಅದರಲ್ಲಿ ತೊಡಗಬೇಕು ಎನ್ನುವುದನ್ನು ನೀವು ಅರಿತುಕೊಂಡಿದ್ದೀರಿ. ತಂದೆಯನ್ನು ನೆನಪು ಮಾಡಬೇಕಾಗಿದೆ. ಹೇಗೆ ಸರ್ಕಾರದ ಸೇವೆಯಲ್ಲಿ 8 ಗಂಟೆಗಳಿರುತ್ತಾರೆ, ಹಾಗೆಯೇ ತಂದೆಯು ಹೇಳುತ್ತಾರೆ ನನ್ನ ಸೇವೆಗೆ 8 ಗಂಟೆಗಳ ಸಮಯ ಕೊಡಿ. ರಾತ್ರಿಯಲ್ಲಿ ಮಲಗಿದ್ದು ತಮ್ಮ ಸಮಯವನ್ನು ನಷ್ಟ ಮಾಡಿಕೊಳ್ಳಬೇಡಿ. ದಿನ-ರಾತ್ರಿ ಸಂಪಾದನೆ ಮಾಡಬೇಕಾಗಿದೆ. ಇದು ಅತಿಸಹಜವಾಗಿದೆ, ಕೇವಲ ಬುದ್ಧಿಯ ಮಾತಾಗಿದೆ. ಮನುಷ್ಯರು ಉದ್ಯೋಗ ವ್ಯಾಪಾರಗಳಿಗೆ ಹೋಗುತ್ತಾರೆಂದರೆ ಮೊದಲು ಮಂದಿರದ ಮುಂದೆ ಕೈ ಜೋಡಿಸಿ ನಂತರ ಅಂಗಡಿಗೆ ಹೋಗುತ್ತಾರೆ ಮತ್ತೆ ಹಿಂತಿರುಗುವ ಸಮಯದಲ್ಲಿ ಮರೆತು ಹೋಗುತ್ತಾರೆ, ಮನೆಯು ನೆನಪಿಗೆ ಬಂದು ಬಿಡುತ್ತದೆ. ಅದೂ ಒಳ್ಳೆಯದಾಗಿದೆ ಆದರೆ ಅದರ ಅರ್ಥವನ್ನು ತಿಳಿದುಕೊಂಡಿಲ್ಲ.

ನೀವು ಮಕ್ಕಳು ಕಲ್ಕತ್ತಾದಲ್ಲಿ ತುಂಬಾ ಒಳ್ಳೆಯ ರೀತಿಯಲ್ಲಿ ತಿಳಿಸಿಕೊಡಬೇಕು - ಅಲ್ಲಿ ಕಾಳಿ ಮಾತೆಗೆ ತುಂಬಾ ಗೌರವವಿದೆ. ಬಂಗಾಳಿಯವರ ರೀತಿ ಪದ್ಧತಿಗಳು ಅವರದೇ ಆದಂತಹ ರೀತಿಯಲ್ಲಿ ಇರುತ್ತದೆ. ಬ್ರಾಹ್ಮಣರಿಗೆ ಅವಶ್ಯವಾಗಿ ಮೀನನ್ನು ತಿನ್ನಿಸುತ್ತಾರೆ. ದೊಡ್ಡ ಮನುಷ್ಯರು ತಮ್ಮ ಸರೋವರದಲ್ಲಿ ಮೀನನ್ನು ಸಾಕುತ್ತಾರೆಂದರೆ ಬ್ರಾಹ್ಮಣರಿಗೂ ಸಹ ಅದನ್ನು ತಿನ್ನಿಸುತ್ತಾರೆ. ಈಗ ನೀವು ಪಕ್ಕಾ ವೈಷ್ಣವರಾಗುತ್ತೀರಿ. ಪ್ರತ್ಯಕ್ಷ ರೂಪದಲ್ಲಿ ನೀವು ವಿಷ್ಣು ಪುರಿಯಲ್ಲಿ ಹೋಗುತ್ತೀರಿ. ಅಲ್ಲಿ ನಾಲ್ಕು ಭುಜವುಳ್ಳ ಮನುಷ್ಯರು ಇರುತ್ತಾರೆಂದಲ್ಲ. ಲಕ್ಷ್ಮಿ-ನಾರಾಯಣರ ಕಂಬೈಂಡ್ ಸ್ವರೂಪಕ್ಕೆ ವಿಷ್ಣು ಎಂದು ಹೇಳಲಾಗುತ್ತದೆ. ಎರಡು ಭುಜ ಲಕ್ಷ್ಮಿಯದು, ಎರಡು ಭುಜ ನಾರಾಯಣನದು. ನೀವು ಲಕ್ಷ್ಮಿಯ ಪೂಜೆ ಮಾಡುತ್ತೀರೆಂದರೆ, ವಾಸ್ತವದಲ್ಲಿ ವಿಷ್ಣುವಿನ ಪೂಜೆ ಮಾಡುತ್ತೀರಿ. ಇಬ್ಬರೂ ಇದ್ದಾರಲ್ಲವೇ, ಆದರೆ ಈ ಸಮಯದಲ್ಲಿ ಮಹಿಮೆಯು ಮಾತೆಯರದಾಗಿದೆ. ಜಗದಾಂಬಾರವರ ಗಾಯನವಿದೆ. ಲಕ್ಷ್ಮಿಯ ಹೆಸರನ್ನೂ ಗಾಯನ ಮಾಡಲಾಗಿದೆ. ತಂದೆಯೇ ಬಂದು ಮಾತೆಯರ ಮುಖಾಂತರ ಎಲ್ಲರಿಗೆ ಸದ್ಗತಿ ಕೊಡುತ್ತಾರೆ. ಜಗದಂಬಾರವರೇ ನಂತರ ರಾಜ-ರಾಜೇಶ್ವರಿ ಆಗುತ್ತಾರೆ. ಮಾತೆಯ ಪೂಜೆ ಆಗುತ್ತದೆ. ವಾಸ್ತವದಲ್ಲಿ ಜಗದಾಂಬಾರವರಂತೂ ಒಬ್ಬರೇ ಆಗಿದ್ದಾರಲ್ಲವೇ. ಶಿವನ ಒಂದು ಲಿಂಗವನ್ನು ಮಾಡುತ್ತಾರೆ, ಹಾಗೆಯೇ ಚಿಕ್ಕ-ಚಿಕ್ಕ ಸಾಲಿಗ್ರಾಮಗಳನ್ನು ಮಾಡುತ್ತಾರೆ. ಹಾಗೆಯೇ ಕಾಳಿಯ ಚಿಕ್ಕ ಮಂದಿರಗಳು ಅನೇಕವಿವೆ. ಇವು ತಾಯಿಯ ಸಂತಾನವಾಗಿವೆ. ಈಗ ತಂದೆಯು ನಿಮ್ಮನ್ನು ತಮ್ಮವರನ್ನಾಗಿ ಮಾಡಿಕೊಳ್ಳುತ್ತಾರೆ, ಇದನ್ನೇ ಬಲಿಹಾರಿ ಆಗುವುದು ಎಂದು ಹೇಳಲಾಗುತ್ತದೆ. ನೀವು ತಂದೆಗೆ ಬಲಿಹಾರಿ ಆಗುತ್ತೀರಿ, ಬ್ರಹ್ಮಾಬಾಬಾರವರಿಗಲ್ಲ.

ಆದ್ದರಿಂದ ತಂದೆಯು ತಿಳಿಸುತ್ತಾರೆ - ಈಗ ಸಮಯವನ್ನು ವ್ಯರ್ಥ ಮಾಡಬಾರದು. ವ್ಯಾಪಾರ ಮುಂತಾದವುಗಳನ್ನು ಭಲೆ ಮಾಡಿ. ಒಂದುವೇಳೆ ಸಾಕಷ್ಟು ಹಣವಿದ್ದರೆ, ತಿನ್ನುವುದಕ್ಕೋಸ್ಕರ ಹೆಚ್ಚಿಗೆ ತಲೆಯನ್ನು ಏಕೆ ಕೆಡಿಸಿಕೊಳ್ಳುತ್ತೀರಿ. ಹಾ! ಶಿವಬಾಬಾರವರ ಯಜ್ಞಕ್ಕೆ ಕೊಡುತ್ತೀರೆಂದರೆ ವಿಶ್ವದ ಸೇವೆಯಲ್ಲಿ ತೊಡಗಿಸುತ್ತೀರಿ. ತಂದೆಯು ಸೇವಾಕೇಂದ್ರಗಳನ್ನು ತೆರೆಯಿರಿ ಎಂದು ಹೇಳುತ್ತಾರೆ. ಅಲ್ಲಿ ಈ ಮಕ್ಕಳು ಹೋಗಿ ಮನುಷ್ಯರನ್ನು ದೇವತೆಗಳನ್ನಾಗಿ ಮಾಡುವ ಮಾರ್ಗವನ್ನು ತಿಳಿಸಲಿ. ಈ ವಿದ್ಯೆಯು ಎಷ್ಟೊಂದು ಫಸ್ಟ್ ಕ್ಲಾಸ್ ಆಗಿದೆ. ಇದರಿಂದ ಅನೇಕರ ಕಲ್ಯಾಣವಾಗುವುದು. ತಂದೆಯು ಹೇಳುತ್ತಾರೆ ಮಕ್ಕಳೇ ಲಕ್ಷಗಳು, ಕೋಟಿಗಳನ್ನು ಸಂಪದನೆ ಮಾಡಿ ಆದರೆ ಅದರಿಂದ ಭಾರತವು ಪಾವನ ಆಗುವ, ಸದಾ ಆರೋಗ್ಯವಾಗುವಂತಹ ಕಾರ್ಯ ಮಾಡಿ. ನೀವು ಭವಿಷ್ಯಕ್ಕೋಸ್ಕರ ಈಗ ಪೂರ್ಣ ಆಸ್ತಿಯನ್ನು ತೆಗೆದುಕೊಳ್ಳುತ್ತೀರಿ. ಅಲ್ಲಿ ಬಡವರು ಇರುವುದೇ ಇಲ್ಲ. ಅಲ್ಲಿಯೂ ಸಹ ಈಗಿನ ಪ್ರಾಲಬ್ಧವನ್ನು ಭೋಗಿಸುವುದರಿಂದ ತುಂಬಾ ಧಾರಣೆ ಮಾಡಬೇಕು. ನಿಮ್ಮ ಒಂದೊಂದು ಪೈಸೆಯೂ ಸಹ ವಜ್ರ ಸಮಾನವಾಗಿದೆ. ಇದರಿಂದ ಭಾರತವು ಸ್ವರ್ಗವಾಗುತ್ತದೆ. ಬಾಕಿ ಯಾವುದನ್ನು ಉಳಿತಾಯ ಮಾಡುತ್ತಾರೆ ಅದೆಲ್ಲವೂ ಸಮಾಪ್ತಿ ಆಗಿ ಬಿಡುವುದು, ಆದ್ದರಿಂದ ಎಷ್ಟು ಧನವನ್ನು ಉಳಿತಾಯ ಮಾಡುತ್ತೀರಿ ಅದನ್ನು ಈ ಸೇವೆಯಲ್ಲಿ ತೊಡಗಿಸಿ. ಇದು ದೊಡ್ಡದಕ್ಕಿಂತ ದೊಡ್ಡ ಆಸ್ಪತ್ರೆ ಆಗಿದೆ. ಕೆಲವರು ಬಡ ಮಕ್ಕಳು ಹೇಳುತ್ತಾರೆ ಬಾಬಾ ನಾವು 8 ಆಣೆಗಳನ್ನು ಕೊಡುತ್ತೇವೆ, ಮನೆಗೆ ಇಟ್ಟಿಗೆಯನ್ನು ಹಾಕಿಸಿ. ಇಲ್ಲಿ ಮನುಷ್ಯರು ಸದಾ ಆರೋಗ್ಯವಂತರಾಗುತ್ತಾರೆಂದು ನಾವು ತಿಳಿದುಕೊಳ್ಳುತ್ತೇವೆ. ಇಲ್ಲಂತು ಅನೇಕರು ಬರುತ್ತಾರೆ. ನೀವು ಎಂದೂ ನೋಡಿಲ್ಲದಷ್ಟು ಕ್ಯೂ ನಿಲ್ಲುತ್ತದೆ. ಆದ್ದರಿಂದ ನಾವು ಹೇಗಿದ್ದವರು ಹೇಗಾಗುತ್ತೇವೆ ಎನ್ನುವ ತುಂಬಾ ಖುಷಿ ಇರಬೇಕು. ನಾವು ಶಿವಬಾಬಾರವರಿಂದ ಬೇಹದ್ದಿನ ಆಸ್ತಿಯನ್ನು ತೆಗೆದುಕೊಳ್ಳುತ್ತೇವೆ. ತಂದೆಯು ನಿರಾಕಾರ ಜ್ಞಾನ ಸಾಗರ ಆಗಿದ್ದಾರೆ. ಅವರೇ ಈ ರಥದಲ್ಲಿ ಪ್ರವೇಶ ಮಾಡುತ್ತಾರೆ. ಅಂದಾಗ ಮಕ್ಕಳು ತುಂಬಾ

ದಯಾಹೃದಯಿಗಳಾಗಬೇಕು. ತಮ್ಮ ಮೇಲೂ ಮತ್ತು ಅನ್ಯರ ಮೇಲೂ ದಯೆ ತೋರಿಸಬೇಕು. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾಪಿತ ಬಾಪ್ದಾದಾರವರ ನೆನಪು-ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ತಂದೆಯ ಆತ್ಮೀಯ ಮಕ್ಕಳಿಗೆ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಭಾರತವನ್ನು ಪಾವನವನ್ನಾಗಿ ಮಾಡುವ ಸೇವೆಯಲ್ಲಿ ತಮ್ಮ ತನು-ಮನ-ಧನವನ್ನು ಸಫಲ ಮಾಡಬೇಕಾಗಿದೆ. ಒಂದೊಂದು ಪೈಸೆಯನ್ನು ವಜ್ರವೆಂದು ತಿಳಿದು ಭಾರತವನ್ನು ಸ್ವರ್ಗ ಮಾಡುವಂತಹ ಸೇವೆಯಲ್ಲಿ ತೊಡಗಿಸಬೇಕಾಗಿದೆ, ವ್ಯರ್ಥವಾಗಿ ಕಳೆಯಬಾರದಾಗಿದೆ.

2. ಭವಿಷ್ಯದ 21 ಜನ್ಮಗಳ ಪ್ರಾಲಬ್ಧವನ್ನು ಮಾಡಿಕೊಳ್ಳಲು ದಿನ-ರಾತ್ರಿ ಸಂಪಾದನೆಯನ್ನು ಜಮಾ ಮಾಡಿಕೊಳ್ಳಬೇಕು, ಸಮಯವನ್ನು ವ್ಯರ್ಥವಾಗಿ ಕಳೆಯಬಾರದು. ಶರೀರವನ್ನು ಮರೆಯುವ ಪುರುಷಾರ್ಥವನ್ನು ಮಾಡಬೇಕಾಗಿದೆ.

ವರದಾನ: ಅಕಾಲ ಸಿಂಹಾಸನದಿಂದ ಹೃದಯ ಸಿಂಹಾಸನಾಧಿಕಾರಿ ಆಗಿದ್ದು ಸ್ವರಾಜ್ಯದ ನಶೆಯಲ್ಲಿರುವಂತಹ ಪ್ರಕೃತಿಜೀತ, ಮಾಯಾಜೀತ ಭವ.

ಅಕಾಲ ಸಿಂಹಾಸನ ಅಧಿಕಾರಿ ಆತ್ಮನು ಸದಾ ಆತ್ಮಿಕ ನಶೆಯಲ್ಲಿ ಇರುತ್ತಾನೆ. ಹೇಗೆ ರಾಜನು ನಶೆಯಿಲ್ಲ ರಾಜ್ಯಾಡಳಿತ ಮಾಡಲು ಸಾಧ್ಯವಿಲ್ಲವೋ ಹಾಗೆಯೇ ಆತ್ಮನು ಒಂದುವೇಳೆ ಸ್ವರಾಜ್ಯದ ನಶೆಯಿಲ್ಲದಿದ್ದರೆ ಕರ್ಮೇಂದ್ರಿಯಗಳೆಂಬ ಪ್ರಜೆಗಳ ಮೇಲೆ ರಾಜ್ಯಾಡಳಿತ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಅಕಾಲ ಸಿಂಹಾಸನಾಧಿಕಾರಿಯಿಂದ ಹೃದಯ ಸಿಂಹಾಸನಾಧಿಕಾರಿ ಆಗಿರಿ ಹಾಗೂ ಇದೇ ನಶೆಯಲ್ಲಿರುತ್ತೀರೆಂದರೆ, ತಮ್ಮ ಮುಂದೆ ಯಾವುದೇ ವಿಘ್ನಗಳು ಅಥವಾ ಸಮಸ್ಯೆಗಳು ಬರಲು ಸಾಧ್ಯವಿಲ್ಲ. ಪ್ರಕೃತಿ ಹಾಗೂ ಮಾಯೆಯೂ ಸಹ ಯುದ್ಧ ಮಾಡಲು ಸಾಧ್ಯವಿಲ್ಲ. ಅಂದಮೇಲೆ ಸಿಂಹಾಸನಾಧೀಶರಾಗುವುದು ಅರ್ಥಾತ್ ಸಹಜವಾಗಿ ಪ್ರಕೃತಿಜೀತ ಮತ್ತು ಮಾಯಾಜೀತರಾಗುವುದು.

ಸ್ಲೋಗನ್: ಸಂಕಲ್ಪಗಳ ಸಿದ್ಧಿಯನ್ನು ಪ್ರಾಪ್ತಿ ಮಾಡಿಕೊಳ್ಳಬೇಕೆಂದರೆ ಆತ್ಮ ಶಕ್ತಿಯ ಇಂಧನವನ್ನು ತುಂಬುತ್ತಿರಿ.